I/744975/2025

ಕರ್ನಾಟಕ ಸರ್ಕಾರ
ತಾಂತ್ರಿಕ ಶಿಕ್ಷಣ ಇಲಾಖೆ

ಸಂಖ್ಯೆ: **DTE-ADMI/1/2025**

ಆಯುಕ್ತರ ಕಛೇರಿ
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ
ಅರಮನೆ ರಸ್ತೆ, ಬೆಂಗಳೂರು-560001
ದಿನಾಂಕ: 09-01-2025

# <u>ಸುತ್ತೋಲೆ</u>

ವಿಷಯ: ರಾಜ್ಯದ ಸರ್ಕಾರಿ ಇಂಜಿನಿಯರಿಂಗ್/ಪಾಲಿಟೆಕ್ನಿಕ್/ಕಿರಿಯ ತಾಂತ್ರಿಕ ಶಾಲೆಗಳಿಂದ ಆಯುಕ್ತಾಲಯಕ್ಕೆ ರಜೆ ಮಂಜೂರಾತಿ ಪ್ರಸ್ತಾವನೆ ಕಳುಹಿಸುವ ಬಗ್ಗೆ- ಮಾರ್ಗಸೂಚಿ

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ರಾಜ್ಯದ ಸರ್ಕಾರಿ ಇಂಜಿನಿಯರಿಂಗ್/ಪಾಲಿಟೆಕ್ನಿಕ್/ಕಿರಿಯ ತಾಂತ್ರಿಕ ಶಾಲೆಗಳಲ್ಲಿನ ಅಧಿಕಾರಿ/ಸಿಬ್ಬಂದಿಗಳು ಅನಧಿಕೃತ ಗೈರುಹಾಜರಾದಲ್ಲಿ ಅಥವಾ ದೀರ್ಘಾವಧಿ ರಜೆಯ ಮೇಲೆ ತೆರಳಿದಲ್ಲಿ, ಸದರಿಯವರುಗಳ ಗೈರುಹಾಜರಾತಿ/ರಜೆ ಮಂಜೂರಾತಿ ಪ್ರಸ್ತಾವನೆಗಳನ್ನು ಆಯುಕ್ತಾಲಯಕ್ಕೆ ಕಳುಹಿಸುವ ಸಂದರ್ಭದಲ್ಲಿ ಈ ಕೆಳಕಂಡಂತೆ ಪರಿಶೀಲಿಸಿ ಕ್ರಮ ಕೈಗೊಳ್ಳುವಂತೆ ತಿಳಿಸಲಾಗಿದೆ.

- ಪ್ರಾಚಾರ್ಯರು ತಮ್ಮ ಅಧೀನದಲ್ಲಿ ಬರುವ ಅಧಿಕಾರಿ/ ಸಿಬ್ಬಂದಿಗಳ ಒಟ್ಟು ರಜಾ ಅವಧಿಯ ಮಂಜೂರಾತಿಗೆ ಸಂಬಂಧಿಸಿದಂತೆ ಸರ್ಕಾರವು ಕಾಲಕಾಲಕ್ಕೆ ಹೊರಡಿಸುವ ಆದೇಶಗಳಲ್ಲಿನ ಸಾಮಾನ್ಯ ವಿತ್ತಾಧಿಕಾರದನ್ವಯ ಹಾಗೂ ಕೆ ಸಿ ಎಸ್ ನಿಯಮಾನುಸಾರ {192 (ಡಿ)} ಪರಿಶೀಲಿಸಿ, ತಮ್ಮ ಅಧಿಕಾರ ವ್ಯಾಪ್ತಿಯಲ್ಲಿ ಬರುತ್ತಿರುವ ಪ್ರಕರಣಗಳಿಗೆ ಸಂಬಂಧಿಸಿದಂತೆ ಸಂಸ್ಥೆಯ ಹಂತದಲ್ಲಿಯೇ ಮಂಜೂರಾತಿ ನೀಡಲು ಕ್ರಮಕೈಗೊಳ್ಳುವುದು.
- ರಜಾ ಅವಧಿಯು ತಮ್ಮ ವಿತ್ತಾಧಿಕಾರ ಮೀರುತ್ತಿದ್ದಲ್ಲಿ, ಹಾಗೂ ಸದರಿ ರಜಾ ಅವಧಿಯು ವೈದ್ಯಕೀಯ ಕಾರಣದ ಮೇರೆಗೆ ಪರಿಗಣಿಸುವಂತಿದ್ದಲ್ಲಿ, ಸದರಿಯವರಿಂದ ಕಡ್ಡಾಯವಾಗಿ ಕೆ ಸಿ ಎಸ್ ನಿಯಮಾನುಸಾರ ನಿಗದಿ ಪಡಿಸಿದ ನಮೂನೆಯಲ್ಲಿಯೇ ವೈದ್ಯಕೀಯ ಪ್ರಮಾಣ ಪತ್ರ/ fitness certificate ಪಡೆದು, ಜಿಲ್ಲಾ ವೈದ್ಯಾಧಿಕಾರಿಗಳಿಂದ ಮೇಲು ರುಜುಗೊಳಿಸಿ ವೈದ್ಯಕೀಯ ಪ್ರಮಾಣ ಪತ್ರದ ನೈಜತೆಯ ಬಗ್ಗೆ ವೈದ್ಯಕೀಯ ಮಂಡಳಿಯಿಂದ ಪರಿಶೀಲಿಸಿ ಆಯುಕ್ತಾಲಯಕ್ಕೆ ಪ್ರಸ್ತಾವನೆ ಕಳುಹಿಸುವುದು.
- ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳು, ನಿಯಮ 107ರ ರೀತ್ಯಾ ನೌಕರರು ರಜೆ ಪಡೆಯುವುದು ತನ್ನ ಹಕ್ಕೆಂದು ಭಾವಿಸುವ ಹಾಗಿಲ್ಲ. ಯಾವುದೇ ದೀರ್ಘವಾಧಿ ರಜೆಯ ಮೇಲೆ ತೆರಳುವ ಸಂದರ್ಭದಲ್ಲಿ ರಜೆ ಮಂಜೂರಾದ ನಂತರ ಅಥವಾ ಪೂರ್ವಾನುಮತಿ ಪಡೆದು ರಜೆಯ ಮೇಲೆ ತೆರಳಬೇಕಾಗಿರುತ್ತದೆ. ಇದನ್ನು ಮೀರಿ ಅನಧಿಕೃತ ಗೈರು ಹಾಜರಿ ಪ್ರಕರಣಗಳಲ್ಲಿ ಸದರಿ ನೌಕರರಿಗೆ ನಿಯಮಾನುಸಾರ ಜ್ಞಾಪನ ನೀಡಿ, ಸಮಜಾಯಿಷಿ ಪಡೆದು, ಅನಧಿಕೃತ ಗೈರು ಹಾಜರಿ ಬಗ್ಗೆ ಪ್ರಾಂಶುಪಾಲರು ದೃಢಿಕರಿಸಿರುವ ಹಾಜರಾತಿ ಪುಸ್ತಕದ ಪ್ರತಿ ಹಾಗೂ ಅನಧಿಕೃತ ಗೈರುಹಾಜರಿ ಸಮರ್ಥಿಸುವ ಇನ್ನಿತರ ದಾಖಲೆಗಳನ್ನು ದೃಢಿಕರಿಸಿ ಸಂಕ್ಷಿಪ್ತ ವರದಿಯೊಂದಿಗೆ ಅಂತಹ ಅಧಿಕಾರಿ/ ಸಿಬ್ಬಂದಿ ವಿರುದ್ಧ ಶಿಸ್ತುಕ್ರಮ ಕೈಗೊಳ್ಳುವ ಬಗ್ಗೆ ತಮ್ಮ ಶಿಫಾರಸ್ಸು/ ಸ್ಪಷ್ಟ ಅಭಿಪ್ರಾಯದೊಂದಿಗೆ ಪ್ರಸ್ತಾವನೆಯನ್ನು ಆಯುಕ್ತಾಲಯಕ್ಕೆ ಕಳುಹಿಸಿಕೊಡುವುದು.

ಆದ್ದರಿಂದ ಪ್ರಾಚಾರ್ಯರು ತಮ್ಮ ಹಂತದಲ್ಲಿಯೇ ಕ್ರಮ ಜರುಗಿಸಬಹುದಾದ ಪ್ರಕರಣಗಳನ್ನು ಪರಿಶೀಲಿಸದೆ ನೇರವಾಗಿ ಆಯುಕ್ತಾಲಯಕ್ಕೆ ಪ್ರಸ್ತಾವನೆಗಳನ್ನು ಸಲ್ಲಿಸುವದರಿಂದ ಆಗುವ ವಿಳಂಬವನ್ನು ತಪ್ಪಿಸಲು ನಿಯಮಾನುಸಾರ ಕ್ರಮ ಕೈಗೊಳ್ಳುವಂತೆ ತಿಳಿಸಲಾಗಿದೆ. ತಪ್ಪಿದಲ್ಲಿ ಆಗುವ ಕಾಲ ವಿಳಂಬ/ಮುಂದಿನ ಬೆಳವಣಿಗೆಗೆ ಸಂಸ್ಥೆಯ ಪ್ರಾಚಾರ್ಯರೆ ನೇರ ಹೊಣೆಗಾರರಾಗಿರುತ್ತಾರೆ.

Signed by
Prasanna H
ನಿರ್ದೇಶಕರು
ತಾಂತ್ರಿಕ ಶಿಕ್ಷಣ ಇಲಾಖೆ
ಬೆಂಗಳೂರು
Date: 09-01-2025 11:23:25